# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 212 (259) |
| 2 | ಸದಸ್ಯರ ಹೆಸರು | : | ಶ್ರೀ. ಕೆ. ಪ್ರತಾಪಚಂದ್ರ ಶೆಟ್ಟಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3 | ಉತ್ತರಿಸಬೇಕಾದ ದಿನಾಂಕ | : | 14-09-2021 |
| 4 | ಉತ್ತರಿಸುವ ಸಚಿವರು | : | ನಗರಾಭಿವೃದ್ಧಿ ಸಚಿವರು |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| (ಅ) | ಉಡುಪಿ ನಗರಕ್ಕೆ ವಾರಾಹಿಯಿಂದ ಕುಡಿಯುವ ನೀರು ಪೂರೈಸುವ ಯೋಜನೆ ಅಂದಾಜು ವೆಚ್ಚ; ಈ ಕಾಮಗಾರಿಯ ಟೆಂಡರ್‌ನ್ನು ಪಡೆದ ಸಂಸ್ಥೆ ಯಾವುದು; ಟೆಂಡರ್‌ನ ಮೊತ್ತವೆಷ್ಟು; ಪ್ರಸ್ತುತ ಕಾಮಗಾರಿಯು ಯಾವ ಹಂತದಲ್ಲಿದೆ; ಈ ಕಾಮಗಾರಿಗೆ ಪಾವತಿಸಲಾದ ಮೊತ್ತವೆಷ್ಟು; (ಹಂತವಾರು ವಿವರವನ್ನು ನೀಡುವುದು) | ಕೆ.ಯು.ಐ.ಡಿ.ಎಫ್.ಸಿ ವತಿಯಿಂದ ಏಷ್ಯನ್ ಅಭಿವೃದ್ಧಿ ಬ್ಯಾಂಕ್(ಎಡಿಬಿ) ಮತ್ತು ಕೇಂದ್ರ ಪುರಸ್ಕೃತ ಅಮೃತ್ ಸಹಯೋಗದೊಂದಿಗೆ ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣೆ ಹೂಡಿಕೆ ಕಾರ್ಯಕ್ರಮದಡಿ (ಕ್ವಿಮಿಪ್) ವಾರಾಹಿ ನದಿ ಮೂಲದಿಂದ ಉಡುಪಿ ನಗರದಲ್ಲಿ ಕುಡಿಯುವ ನೀರು ಸರಬರಾಜು ವ್ಯವಸ್ಥೆಯನ್ನು ಉನ್ನತೀಕರಿಸಲು ಸಗಟು ನೀರು ಸರಬರಾಜು ಕಾಮಗಾರಿಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>**ಕಾಮಗಾರಿಯ ಅಂದಾಜು ವೆಚ್ಚ:**<br>ರೂ 122.50 ಕೋಟಿಗಳು<br><br>**ಕಾಮಗಾರಿಯ ಟೆಂಡರ್‌ನ್ನು ಪಡೆದ ಸಂಸ್ಥೆ:**<br>ಮೇ. ಡಿ.ಆರ್.ಎಸ್. ಇನ್ಫ್ರಾ ಪ್ರೈ.ಲಿ. ಹೈದರಾಬಾದ್.<br><br>**ಟೆಂಡರ್‌ನ ಮೊತ್ತ:** ರೂ 119.50 ಕೋಟಿಗಳು<br><br>**ಕಾಮಗಾರಿಯಲ್ಲಿಯ ಪ್ರಮುಖ ಘಟಕಗಳು:**<br>38 ಕಿ.ಮೀ 864 ಎಂ ಎಂ ವ್ಯಾಸದ ಉಕ್ಕಿನ ಪೈಪ್‌ಲೈನ್ ಅಳವಡಿಸುವುದು, ಜಾಕ್‌ವೆಲ್ ನಿರ್ಮಾಣ, ವಿದ್ಯುತ್ ಯಂತ್ರೋಪಕರಣಗಳ ಅಳವಡಿಕೆ ಹಾಗೂ ಇತರೆ.<br><br>**ಪ್ರಸ್ತುತ ಕಾಮಗಾರಿಯು ಪ್ರಗತಿ:**<br>ಅ) ಭೌತಿಕ ಪ್ರಗತಿ: 56.67%<br>ಆ) ಆರ್ಥಿಕ ಪ್ರಗತಿ: 60.91%<br><br>**ಕಾಮಗಾರಿಗೆ ಇಲ್ಲಿಯವರೆಗೆ ಪಾವತಿಸಲಾದ ಮೊತ್ತ:**<br>ರೂ 72.79 ಕೋಟಿಗಳು. |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| (ಆ) | ಈ ಯೋಜನೆಯ ಮೂಲಕ ಉಡುಪಿ ನಗರಸಭೆಯನ್ನು ಒಳಗೊಂಡಂತೆ ಯಾವ ಯಾವ ಗ್ರಾಮಗಳಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸಲಾಗುವುದು; ಈ ಯೋಜನೆಯ ಕಾಮಗಾರಿಗಳ ಮೇಲುಸ್ತುವಾರಿಯನ್ನು ಯಾವ ಸಂಸ್ಥೆಯ ಮೂಲಕ ನಿರ್ವಹಿಸಲಾಗುತ್ತಿದೆ; ಮೇಲುಸ್ತುವಾರಿಯನ್ನು ನೋಡಿಕೊಳ್ಳುತ್ತಿರುವ ಇಂಜಿನಿಯರ್ ರವರ ವಿವರವನ್ನು ಒದಗಿಸುವುದು; | ಈ ಯೋಜನೆಯ ಮೂಲಕ ಉಡುಪಿ ನಗರಸಭೆ ಒಳಗೊಂಡಂತೆ ಶುದ್ಧ ಕುಡಿಯುವ ನೀರನ್ನು ಒದಗಿಸಲಾಗುವ ವಾರಾಹಿ ನದಿ ಮೂಲದಿಂದ ಪೈಪ್ ಲೈನ್ ಹಾದು ಹೋಗುವ ಮಾರ್ಗ ಮಧ್ಯದ ಗ್ರಾಮಗಳ ವಿವರ **ಅನುಬಂಧ**-1 ರಲ್ಲಿ ಲಗತ್ತಿಸಿದೆ.<br><br>ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಕೆ.ಯು.ಐ.ಡಿ.ಎಫ್.ಸಿ. ವತಿಯಿಂದ ಉಡುಪಿ ನಗರ ಸ್ಥಳೀಯ ಸಂಸ್ಥೆಯಲ್ಲಿ ಯೋಜನಾ ಅನುಷ್ಠಾನ ಘಟಕವನ್ನು ಸೃಜಿಸಲಾಗಿರುತ್ತದೆ. ಇದರಲ್ಲಿ ಕಾರ್ಯಪಾಲಕ ಅಭಿಯಂತರಾಗಿ ಶ್ರೀ ಉಮಾಶಂಕರ ರಾವ್, ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿ ಶ್ರೀ ಸುದರ್ಶನ ನಲವಾಡೆ (ಪ್ರಭಾರದಲ್ಲಿ), ಸಹಾಯಕ ಅಭಿಯಂತರರಾಗಿ ಶ್ರೀ ಸುದರ್ಶನ ನಲವಾಡೆ ರವರುಗಳು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಅದೇ ರೀತಿ ಕಾಮಗಾರಿಯ ವಿನ್ಯಾಸ ಮತ್ತು ಗುಣಮಟ್ಟದ ಕುರಿತು ಸಲಹೆ & ಸಮಾಲೋಚನೆ ಒದಗಿಸಲು ಮೇ. ಜಿ.ಕೆ.ಡಬ್ಲ್ಯೂ ಜಿ.ಎಂ.ಬಿ.ಎಚ್ ರವರನ್ನು ನೇಮಿಸಲಾಗಿರುತ್ತದೆ. ಇದರಲ್ಲಿ ಟೀಂ ಲೀಡರ್ ಆಗಿ ಶ್ರೀ ಲಿಂಗಪ್ಪ ರವರು, ಮೆಕ್ಯಾನಿಕಲ್ ಇಂಜಿನಿಯರ್ ಆಗಿ ಶ್ರೀ ಪ್ರವೀಣ್ ರೇಗೋ, ರೆಸಿಡೆನ್ಷಿಯಲ್ ಇಂಜಿನಿಯರ್ ಆಗಿ ಶ್ರೀ ವಿಶಾಲ್ ಮತ್ತು ಶ್ರೀ ಅರುಣ್ ರವರುಗಳು ಕಾರ್ಯ ನಿರ್ವಹಿಸುತ್ತಿರುತ್ತಾರೆ. |
| (ಇ) | ಈ ಕಾಮಗಾರಿಗಳು ಕಳಪೆಯಾಗಿರುವ ಬಗ್ಗೆ ಸಾರ್ವಜನಿಕರಿಂದ ಮತ್ತು ಜನ ಪ್ರತಿನಿಧಿಗಳಿಂದ ಅಭಿಪ್ರಾಯ ವ್ಯಕ್ತವಾಗುತ್ತಿರುವ ಹಿನ್ನೆಲೆಯಲ್ಲಿ ಈ ಕಾಮಗಾರಿಯ ಪರಿವೀಕ್ಷಣೆಯನ್ನು ನಡೆಸಲಾಗಿದೆಯೇ; ಹೌದಾದಲ್ಲಿ, ವಿಸ್ತೃತ ಮಾಹಿತಿಯನ್ನು ಒದಗಿಸುವುದು; | ಕಾಮಗಾರಿಗಳಲ್ಲಿ ಗುಣಮಟ್ಟವನ್ನು ಕಾಪಾಡಿಕೊಳ್ಳಲು ಕ್ರಮವಹಿಸಲಾಗಿದ್ದು ಅಧಿಕಾರಿಗಳಿಂದ ಕಾಲಕಾಲಕ್ಕೆ ಪರಿವೀಕ್ಷಣೆ ನಡೆಸಲಾಗಿರುತ್ತದೆ. ವಿಸ್ತೃತ ಮಾಹಿತಿಯನ್ನು **ಅನುಬಂಧ**-2 ರಲ್ಲಿ ಲಗತ್ತಿಸಿದೆ. |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| (ಈ) | ಕೆಲವು ಗ್ರಾಮಗಳಿಗೆ ಭೂ ಸ್ವಾಧೀನಕ್ಕೆ ಹಣ ಕಾಯ್ದಿರಿಸುವುದು ಕೆಲವು ಗ್ರಾಮಗಳಿಗೆ ಭೂ ಸ್ವಾಧೀನಕ್ಕೆ ಹಣ ಕಾಯ್ದಿರಿಸದೇ ಇರುವುದು ಸರ್ಕಾರದ ಕ್ಷೇತ್ರವಾರು ನೀತಿಯೇ; ರಾಜ್ಯ ನೀತಿಯೇ: ಉಡುಪಿ ನಗರ ಸಭೆಯ ಸ್ವೇಚ್ಛಾಚಾರದ ನಿರ್ಣಯವೇ? (ಮಾಹಿತಿಯನ್ನು ಒದಗಿಸುವುದು) | ಅಮೃತ್ ಅನುದಾನದಡಿ ಅನುಷ್ಟಾನಗೊಳಿಸಲಾಗುತ್ತಿರುವ ಕಾಮಗಾರಿಗಳಲ್ಲಿ ಸ್ಥಳ/ಜಮೀನಿನ ಭೂಸ್ವಾದೀನತೆಗೆ ಅನುದಾನ ಇರುವುದಿಲ್ಲ. ಆದುದರಿಂದ ಸದರಿ ಲಭ್ಯವಿರುವ ಸರ್ಕಾರಿ ಸ್ಥಳದಲ್ಲಿ ಪೈಪ್ ಲೈನ್ ಅಳವಡಿಸಲಾಗುತ್ತಿದೆ.<br><br>ಎಡಿಬಿ ಮತ್ತು ಸರ್ಕಾರದ ಅನುದಾನದಡಿ ಅನುಷ್ಟಾನಗೊಳಿಸಲಾಗುತ್ತಿರುವ ಕಾಮಗಾರಿಗಳಲ್ಲಿ ಜಲಸಂಗ್ರಹಗಾರಗಳ, ನೀರು ಶುದ್ಧೀಕರಣ ಘಟಕ ಹಾಗೂ ಇತರೆ ಪ್ರಮುಖ ಘಟಕಗಳ ನಿರ್ಮಾಣಕ್ಕೆ ಸ್ಥಳವನ್ನು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಅಥವಾ ಖಾಸಗಿಯವರಿಂದ ಯೋಜನೆಗೆ ಅವಶ್ಯವಿದ್ದಲ್ಲಿ ಕನಿಷ್ಠ ಪ್ರಮಾಣಕ್ಕೆ ಖರೀದಿಸಿ ಅಥವಾ ಭೂಸ್ವಾದೀನ ಪಡಿಸಿಕೊಂಡು ಯೋಜನೆಯ ಘಟಕಗಳನ್ನು ನಿರ್ಮಾಣ ಮಾಡಲಾಗುತ್ತಿದೆ. |

ಕಡತ ಸಂಖ್ಯೆ: ನಅಇ 175 ಪಿ.ಆರ್.ಜೆ 2021

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

ಅನುಬಂಧ-1

ಹಾಲಾಡಿಯಿಂದ ಉಡುಪಿಗೆ ಶುದ್ಧ ಕುಡಿಯುವ ನೀರನ್ನು ಕೊಂಡೊಯ್ಯುವಾಗ ಪೈಪ್ ಲೈನ್ ಹಾದು ಹೋಗುವ ಗ್ರಾಮಗಳಪಟ್ಟಿ-

| ಪೈಪ್ ಲೈನ್ ಹಾದು ಹೋಗುವ ಗ್ರಾಮ ಪಂಚಾಯತ್ | | ಶುದ್ಧ ಕುಡಿಯುವ ನೀರನ್ನು ಒದಗಿಸುವ ಗ್ರಾಮ ಪಂಚಾಯತ್‌ನ ಹಳ್ಳಿಗಳು | |
|---|---|---|---|
| 1 | ಶಂಕರನಾರಾಯಣ | 1 | ಶಂಕರನಾರಾಯಣ |
| | | 2 | ಕುಳ್ಳಂಜೆ |
| 2 | ಹಾಲಾಡಿ | 3 | 76 ಹಾಲಾಡಿ |
| | | 4 | 28 ಹಾಲಾಡಿ |
| 3 | ಆವರ್ಸೆ | 5 | ಆವರ್ಸೆ |
| | | 6 | ಹಿಲಿಯಾನ |
| | | 7 | ಕಮ್ಮಂಜೆ |
| 4 | ಬಿಲ್ಲಾಡಿ | 8 | ಬಿಲ್ಲಾಡಿ |
| | | 9 | ವಂಡಾರ್ |
| 5 | ಹೆಗ್ಗುಂಜೆ | 10 | ಹೆಗ್ಗುಂಜೆ |
| | | 11 | 33 ಶಿರೂರು |
| 6 | ಕಾಡೂರು | 12 | ಕಾಡೂರು |
| | | 13 | ನಡೂರು |
| 7 | ಚೆರ್ಕಾಡಿ | 14 | ಚೆರ್ಕಾಡಿ |
| 8 | ಕೊಕ್ಕರ್ಣೆ | 15 | ಪೆಜಮೊಗುರು |
| | | 16 | ಕುದಿ 34 |
| 9 | ಶಾರ್ಜೆ | 17 | ಹಲುವಳ್ಳಿ |
| | | 18 | ಹೊಸೂರು |
| 10 | ಕುಕ್ಕೆಹಳ್ಳಿ | 19 | ಬೆಳ್ಳಂಪಳ್ಳಿ |
| | | 20 | ಕುಕ್ಕೆಹಳ್ಳಿ |
| 11 | ಆರೂರು | 21 | ಆರೂರು |
| 12 | ಹಾವಂಜೆ | 22 | ಹಾವಂಜೆ |
| 13 | ಉಪ್ಪೂರು | 23 | ಉಪ್ಪೂರು |

## ಕಾಮಗಾರಿಯಲ್ಲಿಯ ಗುಣಮಟ್ಟದ ನಿರ್ವಹಣೆಯ ಕುರಿತು ವಿಸ್ತೃತ ವರದಿ

ಕೆ.ಯು.ಐ.ಡಿ.ಎಫ್.ಸಿ ವತಿಯಿಂದ ಏಷ್ಯನ್ ಅಭಿವೃದ್ಧಿ ಬ್ಯಾಂಕ್(ಎಡಿಬಿ) ಮತ್ತು ಕೇಂದ್ರ ಪುರಸ್ಕೃತ ಅಮೃತ್ ಸಹಯೋಗದೊಂದಿಗೆ ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣೆ ಹೂಡಿಕೆ ಕಾರ್ಯಕ್ರಮದಡಿ (ಕ್ವಿಮಿಪ್) ವಾರಾಹಿ ನದಿ ಮೂಲದಿಂದ ಉಡುಪಿ ನಗರದಲ್ಲಿ ಕುಡಿಯುವ ನೀರು ಸರಬರಾಜು ವ್ಯವಸ್ಥೆಯನ್ನು ಉನ್ನತೀಕರಿಸಲು ಸಗಟು ನೀರು ಸರಬರಾಜು ಕಾಮಗಾರಿಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಕಾಮಗಾರಿಯನ್ನು ಕೇಂದ್ರ ಪುರಸ್ಕೃತ ಅಮೃತ್ ನೆರವಿನೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದೆ.

ಕಾಮಗಾರಿಯ ವ್ಯವಸ್ಥಿತವಾಗಿ ಅನುಷ್ಠಾನಗೊಳಿಸಲು ಉಡುಪಿ ನಗರಸಭೆಯಲ್ಲಿ ಕೆಯುಐಡಿಎಫ್‌ಸಿ ಸಹಯೋಗದಲ್ಲಿ ಯೋಜನಾ ಅನುಷ್ಠಾನ ಘಟಕವನ್ನು ಸ್ಥಾಪಿಸಲಾಗಿದ್ದು, ಘಟಕದಲ್ಲಿ ಕಾರ್ಯಪಾಲಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಹಾಯಕ ಅಭಿಯಂತರರು ಕಾರ್ಯನಿರ್ವಹಿಸುತ್ತಿರುತ್ತಾರೆ. ಅದೇ ರೀತಿ ಕಾಮಗಾರಿಯ ವಿನ್ಯಾಸ ಮತ್ತು ಗುಣಮಟ್ಟದ ಕುರಿತು ಸಲಹೆ, ಮೇಲ್ವಿಚಾರಣೆ & ಸಮಾಲೋಚನೆ ಒದಗಿಸಲು ಮೇ. ಡಿಕೆಡಬ್ಲ್ಯೂ ಜಿವಿಬಿಎಫ್ ರವರನ್ನು ಸಮಾಲೋಚಕರಾಗಿ ನೇಮಿಸಲಾಗಿರುತ್ತದೆ. ಇದರಲ್ಲಿ ಟೀಂ ಲೀಡರ್, ಮೆಕ್ಯಾನಿಕಲ್ ಇಂಜಿನಿಯರ್, ರೆಸಿಡೆನ್ಷಿಯಲ್ ಇಂಜಿನಿಯರ್ ರವರುಗಳು ಕಾರ್ಯ ನಿರ್ವಹಿಸುತ್ತಿರುತ್ತಾರೆ. ಕಾಮಗಾರಿಯಲ್ಲಿ ಉಪಯೋಗಿಸುವ ಉಕ್ಕಿನ ಪೈಪ್‌ಗಳಿಗೆ ಸ್ವತಂತ್ರ ತಪಾಸಣಾ ಸಂಸ್ಥೆಯವರು ಪರಿಶೀಲಿಸಿ ಒಪ್ಪಿದ ವರದಿಯನ್ನು ಸಲ್ಲಿಸಿದ ನಂತರವೆ ಉಪಯೋಗಿಸಲು ಅನುಮತಿ ನೀಡಲಾಗಿರುತ್ತದೆ. ಮರಳು,ಜಲ್ಲಿ ಸಿಮೆಂಟ್ ಸಾಮಗ್ರಿಗಳಿಗೆ ಸಂಬಂಧಿಸಿದಂತೆ ಗುಣಮಟ್ಟದ ಪರೀಕ್ಷೆಗಳನ್ನು ಪ್ರಯೋಗಾಲಯದಲ್ಲಿ ಸ್ಥಳೀಯ ಇಂಜಿಯನಿಯರಿಂಗ್ ಕಾಲೇಜ್‌ಗಳಲ್ಲಿ ಮಾಡಲಾಗುತ್ತದೆ. ಉಕ್ಕಿನ ಪೈಪ್‌ಗಳ ವೆಲ್ಡಿಂಗ್ ಜಾಯಿಂಟ್‌ಗಳನ್ನು Ultrasonic Test ಗಳಿಂದ ಖಚಿತ ಪಡಿಸಿಕೊಳ್ಳಲಾಗುತ್ತದೆ. ಜಾಯಿಂಟ್‌ಗಳನ್ನು ಪರಿಶೀಲಿಸಲು ಅವಶ್ಯಕತೆಯಿರುವ ಒತ್ತಡಕ್ಕಿಂತಲೂ ಒಂದೂವರೆ ಪಟ್ಟು ಹೆಚ್ಚು ಒತ್ತಡದಲ್ಲಿ ಪೈಪ್‌ಗಳನ್ನು ಪರೀಕ್ಷೆಗೆ ಒಳಪಡಿಸಿ ಖಾತ್ರಿಪಡಿಸಿಕೊಳ್ಳಲಾಗುತ್ತಿದೆ. ಕಾಮಗಾರಿಗಳಿಗೆ ಬಿಲ್‌ಗಳನ್ನು ಪಾವತಿಸುವ ಮೊದಲು ಅವಶ್ಯವಿರುವ ಗುಣಮಟ್ಟಗಳನ್ನು ಪರೀಕ್ಷೆ ಮಾಡಿ ಖಾತ್ರಿಪಡಿಸಿಕೊಂಡು ಪಾವತಿಸಲಾಗುತ್ತದೆ.

ಕ್ವಿಮಿಪ್ ನ ಮಂಗಳೂರು ವಲಯ ಕಛೇರಿಯಲ್ಲಿ ಮುಖ್ಯ ಅಭಿಯಂತರರಾದ ವೈಯಕ್ತಿಕ ಸಮಾಲೋಚಕರು ಕಾರ್ಯನಿರ್ವಹಿಸುತ್ತಿದ್ದು ಇವರು ಕಾಲಕಾಲಕ್ಕೆ ಕಾಮಗಾರಿಗಳ ಸ್ಥಳ ಪರಿಶೀಲನೆ ಮಾಡುತ್ತಿರುತ್ತಾರೆ. ಅದೇ ರೀತಿ ಕೆ.ಯು.ಐ.ಡಿ.ಎಫ್.ಸಿ ಯ ಕೇಂದ್ರ ಕಛೇರಿಯಿಂದ ಕಾಲಕಾಲಕ್ಕೆ ಕಾರ್ಯಕಾರಿ ವ್ಯವಸ್ಥಾಪಕರು ಕ್ವಿಮಿಪ್ ರವರು ಕಾಮಗಾರಿಗಳ ಸ್ಥಳ ಪರಿಶೀಲನೆ ನಡೆಸುತ್ತಿರುತ್ತಾರೆ.

ಮುಂದುವರೆದು, ಕೇಂದ್ರ ಪುರಸ್ಕೃತ ಅಮೃತ್ ಸಹಯೋಗದೊಂದಿಗೆ ಸದರಿ ಕಾಮಗಾರಿನ್ನು ಅನುಷ್ಠಾನಗೊಳಿಸುತ್ತಿರುವುದರಿಂದ ಕೇಂದ್ರ ಸರ್ಕಾರವು ನೇಮಿಸಿರುವ Independent Review Monitoring Agency (IRMA) ತಂಡದಿಂದ ಸ್ಥಳ ಪರಿಶೀಲನೆ ನಡೆಸಲಾಗಿದ್ದು ಕಾಮಗಾರಿಯ ಗುಣಮಟ್ಟದ ಕುರಿತು ತೃಪ್ತಿಯನ್ನು ವ್ಯಕ್ತಪಡಿಸಿರುತ್ತಾರೆ.